ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/308/ಸುತ್ತೋಲೆ/2018-19/ಸೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 04.2018

## ಸುತ್ತೋಲೆ

**ವಿಷಯ:** ವಿದೇಶಗಳಿಗೆ ಹೋಗಿ ಬರಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ:ಇಡಿ/01/ಯುಇಸಿ/2017, ದಿನಾಂಕ:05.04.2017

*****

ಎಲ್ಲಾ ಕಾಲೇಜು ಶಿಕ್ಷಣ ಇಲಾಖಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮತ್ತು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೂ ಈ ಮೂಲಕ ತಿಳಿಸುವುದೇನೆಂದರೆ, ವಿದೇಶಗಳಿಗೆ ಹೋಗಿ ಬರಲು ಅನುಮತಿ ಕೋರುವುದಕ್ಕೆ ಸಂಬಂಧಿಸಿದಂತೆ ಅಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ಕಳುಹಿಸುತ್ತಿರುವುದರಿಂದ ನಿರಾಕ್ಷೇಪಣಾ ಪತ್ರಗಳನ್ನು ನೀಡುವಲ್ಲಿ ಅನಾವಶ್ಯಕವಾಗಿ ಪತ್ರ ವ್ಯವಹಾರಗಳಿಗೆ ಆಸ್ಪದ ಉಂಟಾಗಿರುತ್ತದೆ ಹಾಗೂ ವಿಳಂಬಕ್ಕೂ ಕಾರಣವಾಗಿರುತ್ತದೆ. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಅನುಮತಿ ಪಡೆಯಬೇಕಾಗಿರುವ ಕಾರಣ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಲಾಗಿರುವ ಮಾಹಿತಿ/ದಾಖಲಾತಿಗಳನ್ನು ಪ್ರಾಂಶುಪಾಲರ ಸಹಿ ಮತ್ತು ಮೊಹರಿನೊಂದಿಗೆ ಕನಿಷ್ಟ ಒಂದು ತಿಂಗಳು ಮುಂಚಿತವಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ ಹಾಗೂ ಅನುಬಂಧದಲ್ಲಿ ತಿಳಿಸಿರುವ ನಮೂನೆಯಲ್ಲಿ ಮಾಹಿತಿಗಳನ್ನು ನಮೂದಿಸಿ ಪ್ರಾಂಶುಪಾಲರು ದೃಢೀಕರಿಸಿ, ದೃಢೀಕೃತ ಪೂರಕ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು. ಅಪೂರ್ಣ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

Sulpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:-**

1) ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2) ಹೆಚ್ಚಿನ ಪ್ರತಿ.
3) ಕಛೇರಿ ಪ್ರತಿ.

## ಅನುಬಂಧ-1

ಸರ್ಕಾರಿ ಅಧಿಕಾರಿಗಳು/ನೌಕರರು ವಿದೇಶ ಪ್ರವಾಸ ಕೈಗೊಳ್ಳುವ ಸಂಬಂಧ ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ/ಇಲಾಖೆಗೆ ಸಲ್ಲಿಸಬೇಕಾಗಿರುವ ವಿವರಗಳ ಪಟ್ಟಿ.

| ಕ್ರಮ. ಸಂಖ್ಯೆ | ವಿವರಗಳು | ಮಾಹಿತಿ (ಪೂರಕ ದಾಖಲಾತಿಗಳದ್ದಲ್ಲಿ ಲಗತ್ತಿಸಲಾಗಿರುವ ಬಗ್ಗೆ ನಮೂದಿಸುವುದು) |
|---|---|---|
| | | |
| 1) | a. ಅಧಿಕಾರಿ/ನೌಕರರ ಹೆಸರು | |
| | b. ಅಧಿಕಾರಿ/ನೌಕರರ ಪದನಾಮ | |
| | c. ಅಧಿಕಾರಿ/ನೌಕರರ ಸ್ಥಳೀಯ ವಿಳಾಸ | |
| 2) | a. ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಸ್ಥಳ, | |
| | b. ದಿನಾಂಕ | |
| | c. ಒಟ್ಟು ಅವಧಿ | |
| | d. ವಿಳಾಸ | |
| 3) | ಪ್ರವಾಸದ ಉದ್ದೇಶ | |
| 4) | ಪ್ರವಾಸದ ಒಟ್ಟು ವೆಚ್ಚ ಹಾಗೂ ಭರಿಸುವ ಬಗೆ ವೆಚ್ಚ ಭರಿಸಲಾಗುತ್ತಿರುವ ಬ್ಯಾಂಕ್ ಖಾತೆಯ ತಃಖ್ತೆಯ ಪ್ರತಿಯೊಂದಿಗೆ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| 5) | ಹಕ್ಕಿನಲ್ಲಿರುವ ರಜೆಯ ವಿವರ:<br>a. ಗ್ರೂಪ್ 'ಎ', 'ಬಿ' ವರ್ಗಕ್ಕೆ ಸೇರಿರುವ ಬೋಧಕ/ ಬೋಧಕೇತರ ಸಿಬ್ಬಂದಿಗಳು ಮಹಾಲೇಖಪಾಲರಿಂದ ಪಡೆದ ರಜಾ ಶೀರ್ಷಿಕೆ ಲಗತ್ತಿಸುವುದು ('ಬಿ' ವರ್ಗಕ್ಕೆ ಸೇರಿದ ರೂ.6,000/- ಎ.ಜಿ.ಪಿ ಪಡೆಯುತ್ತಿರುವ ಬೋಧಕರು ಮತ್ತು ಗೆಜೆಟೆಡ್ ಮ್ಯಾನೇಜರುಗಳು ಸೇವಾಪುಸ್ತಕದಲ್ಲಿ ದಾಖಲಾಗಿರುವ ವಿವರಗಳನ್ನು ಸಲ್ಲಿಸತಕ್ಕದ್ದು)<br>b. 'ಸಿ' ಮತ್ತು 'ಡಿ' ವರ್ಗಕ್ಕೆ ಸೇರಿದ ಸಿಬ್ಬಂದಿಗಳು ಸೇವಾಪುಸ್ತಕದಲ್ಲಿ ದಾಖಲಾಗಿರುವ ರಜೆಯ ವಿವರಗಳನ್ನು ಸಲ್ಲಿಸತಕ್ಕದ್ದು. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| 6) | ಪರೀಕ್ಷಾರ್ಥ ಅವಧಿ ಘೋಷಣೆಯಾಗಿದೆಯೇ? | |
| 7) | ಇಲಾಖಾ ವಿಚಾರಣೆ/ನ್ಯಾಯಾಲಯ ಪ್ರಕರಣಗಳು ಇರುವ/ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |

| | | |
|---|---|---|
| ೮) | ವಿದೇಶ ಪ್ರವಾಸದ ಅವಧಿಯಲ್ಲಿ ಬದಲಿ ವ್ಯವಸ್ಥೆಯ ಬಗ್ಗೆ: | |
| | a. ಬೋಧಕ/ಬೋಧಕೇತರ ಸಿಬ್ಬಂದಿಗಳು ಪ್ರವಾಸ ಕೈಗೊಳ್ಳಲಿರುವುದರಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಹಾಗೂ ಕಛೇರಿಯಲ್ಲಿನ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆ ಯಾಗುವುದಿಲ್ಲವೆಂದು ಪ್ರಾಂಶುಪಾಲರಿಂದ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | b. ರಜಾ ಅವಧಿಯಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಉದ್ದೇಶಿಸಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಗಳಲ್ಲದಿದ್ದರೂ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಮಾಡಿರುವ ಪರ್ಯಾಯ ವ್ಯವಸ್ಥೆ ಬಗ್ಗೆ ಪ್ರಾಂಶುಪಾಲರ ವರದಿ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | c. ಬೋಧನಾ ಸಿಬ್ಬಂದಿ ಕೈಗೊಳ್ಳುವ ವಿದೇಶ ಪ್ರವಾಸದಿಂದ ಪರೀಕ್ಷಾ ಕಾರ್ಯಗಳು ಹಾಗೂ ವಿಶ್ವವಿದ್ಯಾಲಯದ ಇತರೆ ಚಟುವಟಿಕೆಗಳಿಗೆ ಧಕೆಯಾಗುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| ೯) | ಸಲ್ಲಿಸಬೇಕಾದ ಇತರೆ ದಾಖಲಾತಿಗಳು<br>a. ಬೇಬಾಕಿ ಪತ್ರ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | b. ಪಾಸ್‌ಪೋರ್ಟ್ ಪ್ರತಿ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | c. ಅನುಮತಿ ನೀಡಿರುವ ಅವಧಿಗಿಂತ ಹೊರದೇಶ ದಲ್ಲಿ ಉಳಿಯುವುದಿಲ್ಲ ಹಾಗೂ ರಜಾ ಮುಂದುವರೆಸುವ ಬಗ್ಗೆ ಅರ್ಜಿಯನ್ನು ಸಲ್ಲಿಸುವುದಿಲ್ಲ ಮತ್ತು ಹೊರದೇಶದಿಂದ ರಾಜೀನಾಮೆ ಪತ್ರವನ್ನು ಸಲ್ಲಿಸುವುದಿಲ್ಲವೆಂಬ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | d. ಕಳೆದ ೦೩ ವರ್ಷಗಳ ಆಸ್ತಿ & ಋಣ ಪಟ್ಟಿಗಳು | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |

ಮೇಲ್ಕಂಡ ಮಾಹಿತಿ/ದಾಖಲಾತಿಗಳನ್ನು ಪರಿಶೀಲಿಸಿದ್ದು, ಪ್ರಸ್ತಾವನೆಯೊಂದಿಗೆ ಅಗತ್ಯವಿರುವ ದಾಖಲಾತಿಗಳನ್ನು ಲಗತ್ತಿಸಿದ್ದು, ಸದರಿ ನೌಕರರಿಗೆ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ ಎಂದು ಶಿಫಾರಸ್ಸು ಮಾಡಲಾಗಿದೆ.

**ಪ್ರಾಂಶುಪಾಲರು/ಜಂಟಿ ನಿರ್ದೇಶಕರು**
**ಸಹಿ/ಮೊಹರಿನೊಂದಿಗೆ**